<u>ದಿನಾಂಕಃ **05.06.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ದಾವಾಸ್ವತ್ತಿನ ಚೆಕ್ಕುಬಂಧಿಯನ್ನು ತೋರಿಸಿದ ಹಾಗೆ ಪೂರ್ವಕ್ಕೆ ಹೋಗುವ ರಸ್ತೆ ಚಿಕ್ಕನಹಳ್ಳಿ ಕಡೆಗೆ ಹೋಗುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಪಶ್ಚಿಮಕ್ಕೆ ಪ್ರಸ್ತುತವಾಗಿ ಲೀಲಾವತಿ ಎಂಬುವವರು ಇರುತ್ತಾರೆ. ಅವರು ಸದರಿ ಜಮೀನನ್ನು ಶ್ರೀನಿವಾಸ್ ಎಂಬುವವರಿಂದ ಖರೀದಿ ಮಾಡಿದ್ದರು. ಶ್ರೀನಿವಾಸ್‌ರವರು ಜಮೀನಿನ ಮೂಲ ಮಾಲೀಕರಾದ ನರಸಪ್ಪ ಎಂಬುವವರ ಬಳಿ ಖರೀದಿ ಮಾಡಿರುತ್ತಾರೆ. ದಾವಾಸ್ವತ್ತಿನ ಪಶ್ಚಿಮಕ್ಕೆ ಇರುವ ಜಮೀನಿನ ಮೂಲ ಮಾಲೀಕರು ನರಸಪ್ಪ ಎಂದರೆ ಸರಿ. ದಾವಾಸ್ವತ್ತಿನ ಉತ್ತರಕ್ಕೆ ಚೆನ್ನರಾಯಪ್ಪರವರ ಮಕ್ಕಳಾದ ಗೋವಿಂದರಾಜುರವರು ಇರುತ್ತಾರೆ. ದಾವಾಸ್ವತ್ತಿನ ದಕ್ಷಿಣಕ್ಕೆ ತೋರಿಸಿರುವ ರಸ್ತೆ ದಾಡಿಪಾಳ್ಯಕ್ಕೆ ಹೋಗುತ್ತದೆ ಎಂದರೆ ಸರಿ. ಪ್ರಸ್ತುತ ವಾದ ಪತ್ರದ ಜಮೀನು ಮತ್ತು ಓ.ಎಸ್ 208/2020 ರಲ್ಲಿ ಇರುವ ವಾದ ಪತ್ರದ ಶೆಡ್ಯೂಲ್ ಜಮೀನಿನಲ್ಲಿರುವ ಸರ್ವೇ ನಂ. 16/3 ಸಿಯ ಚೆಕ್ಕುಬಂಧಿ ಒಂದೇ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಓ.ಎಸ್ 208/2020 ರಲ್ಲಿ ಪ್ರಸ್ತುತ ಪ್ರತಿವಾದಿಗಳು ನನ್ನ ವಿರುದ್ಧ ಪ್ರಸ್ತುತ ದಾವಾಸ್ವತ್ತು 16/3 ಸಿ ರಲ್ಲಿ 2 ಎಕರೆ 25 ಗುಂಟೆ ಜಮೀನಿನ ಹಕ್ಕುಘೋಷಣೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಮನೆಯಲ್ಲಿ ಯಾವುದೇ ಪಾರಿಕತ್ತು ಆಗಿರುವುದಿಲ್ಲ. ದಾವಾಸ್ವತ್ತು 16/4 ಕ್ಕೆ ಸಂಬಂಧಿಸಿದಂತೆ ಪೋಡಿ ದುರಸ್ತಿ ಕೋರಿ ಸಲ್ಲಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2023 ರಲ್ಲಿ ನಾನು ಸರ್ವೇ ಸ್ಕೆಚ್ ಅನ್ನು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಮಾಡಿಸಿರುತ್ತೇನೆ. ಸರ್ವೇ ಮಹಜರ್‌ನಲ್ಲಿ ನಾನು ತೋರಿಸಿದ ಜಮೀನಿನ ಚೆಕ್ಕುಬಂಧಿ ಸರ್ವೇ ನಂ. 16/3 ಸಿ ಪ್ರತಿವಾದಿಗಳ ಕ್ರಯಪತ್ರದ ಅನುಸಾರ ಖರೀದಿಸಿದ ಜಮೀನಿನ ಚೆಕ್ಕುಬಂಧಿಯನ್ನು ಹೋಲುತ್ತದೆ ಎಂದು ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಹೂಡುವ ಮೊದಲು ನಾನು ದಾವಾಸ್ವತ್ತಿನಲ್ಲಿ ಕೃಷಿ ಮಾಡುತ್ತಿದ್ದೆ.

2020-2021 ರ ಪಹಣಿ ಬೆಳೆ ಕಾಲಂನಲ್ಲಿ ಏನು ನಮೂದಾಗಿರುತ್ತದೆ ಎಂದರೆ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 25.04.1996 ರಂದು ಚೆನ್ನಪ್ಪ ಮತ್ತು ನರಸಪ್ಪ ಎಂಬುವವರು ದಾವಾಸ್ವತ್ತು ಎಂದು ಹೇಳಲಾದ ಜಮೀನನ್ನು ಅದರ ಪಾಲು ಪಾರಿಕತ್ತನ್ನು 16/3 ಸಿ ಸರ್ವೇ ನಂಬರಿನ 2 ಎಕರೆ 25 ಗುಂಟೆ ಜಮೀನನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹಾಗೂ ಓ.ಎಸ್ 208/2020 ಹೂಡಿದ ನಂತರ ನಾನು ಸರ್ವೇ ನಂ.

16/3 ಸಿ ಜಮೀನನ್ನು ಸರ್ವೇ ನಂ. 16/4 ಜಮೀನಾಗಿ ತೋರಿಸಲು ಸುಳ್ಳು ಪೋಡಿ ದುರಸ್ತಿ ಇತರೆ ಅರ್ಜಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವಾಸ್ವತ್ತನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ನಮ್ಮೂರಿನಲ್ಲಿ ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ದಾವಾಸ್ವತ್ತಿನ ಜಮೀನು ಚೆಕ್ಕುಬಂಧಿ ಪ್ರತಿವಾದಿಗಳ ಜಮೀನಿನಾದ ಸರ್ವೇ ನಂ. 16/3 ಸಿ ಯ ಚೆಕ್ಕುಬಂಧಿಯನ್ನು ತೋರಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ದಕ್ಷಿಣದ ರಸ್ತೆಯ ನಂತರ ಪ್ರತಿವಾದಿಗಳ ಜಮೀನು ಇರುತ್ತದೆ ಎಂದರೆ ಸರಿ. ಸುಮಾರು 15 ವರ್ಷಗಳಿಂದ ಹೆಚ್ಚಾಗಿ ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮೂಲ ಮಾಲೀಕರಾದ ಕಾಮಣ್ಣರವರು ಕದೀರಪ್ಪರವರಿಗೆ 1942 ರಲ್ಲಿ ದಾವಾಸ್ವತ್ತನ್ನು 16/3 ಸಿ ಸರ್ವೇ ನಂಬರಿನ ಜಮೀನನ್ನು ತೋರಿಸಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1996 ರಲ್ಲಿ ಕದೀರಪ್ಪ ಎಂಬುವವರ ಮನೆಯಲ್ಲಿ ಪಾರಿಕತ್ತು ಆಗಿ ತದನಂತರ ಪ್ರಸ್ತುತ ಪ್ರತಿವಾದಿಗಳು ಸರ್ವೆ ನಂ. 16/3 ಸಿ ಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. 16/4 ರ ವಿಸ್ತೀರ್ಣ ಬೇರೆ ಕಡೆಯಿದ್ದು, ಪ್ರಸ್ತುತ ದಾವೆಯಲ್ಲಿ 16/3 ಸಿ ಯ ಚೆಕ್ಕುಬಂಧಿಗಳನ್ನು 16/4 ಕ್ಕೆ ಇದೆ ಎಂದು ತೋರಿಸಿ ಪ್ರಸ್ತುತ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹೂಡಿರುತ್ತೀರಾ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲುಃ</u> ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**